**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.** PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ ೦ಃ 27.03.2025

ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ

ನಿಮ್ಮ ತಾತನ ಹೆಸರು ಕೋಲಕಾರ್ ಚೆನ್ನ ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವರು ನನ್ನ ತಂದೆಯ ತಾತ ಇರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾತನ ಹೆಸರು ಕೋಲಕಾರ್ ಜವರೇಗೌಡ ಇರುತ್ತದೆ.

ಸದರಿ ಕೋಲಕಾರ್ ಜವರೇಗೌಡರಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಅವರುಗಳೆಂದರೆ ಜವರೇಗೌಡ ಅಲಿಯಾಸ್ ಜವರಾಯಿ ಹಾಗೂ ಕೋಲಕಾರ್ ಜವರಪ್ಪ ಇರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಜವರೇಗೌಡ ಅಲಿಯಾಸ್ ಜವರಯ್ಯ ಹಾಗೂ ಕೋಲಕಾರ್ ಜವರಪ್ಪ ಇರುತ್ತಾರೆ ಎಂದು ನುಡಿಯುತ್ತಾರೆ.

ನನ್ನ ತಂದೆಗೆ ಇಬ್ಬರು ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಇರುತ್ತೇವೆ. ದಾವಾ ಸ್ವತ್ತು ನಮಗೆ ಹೇಗೆ ಬಂತು ಎಂದು ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಅವು ಯಾವ ದಾಖಲೆಗಳು ಎನ್ನುವ ಪ್ರಶ್ನೆಗೆ ಸಾಕ್ಷಿಯು ಪಹಣಿ ಪತ್ರಿಕೆ, ಆಕಾರ್ ಬಂದ್ ಮುಂತಾದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂ.621/4 ರಲ್ಲಿ 23 ಗುಂಟೆ ಭಾಗ ಆಗಿರುವ ಬಗ್ಗೆ ಯಾವುದಾದರೂ ದಾಖಲೆಗಳನ್ನು ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನಮ್ಮ ದಾಖಲೆಗಳನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ಸರ್ವೆ ನಂ.621/4 ರಲ್ಲಿ ನಿಮಗೆ ಎಷ್ಟು ಭಾಗ ಬಂದಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು 11 ಗುಂಟೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ.621/4 ರಲ್ಲಿ ಉಳಿದ 12 ಗುಂಟೆ ಯಾರಿಗೆ ಹೋಗಿರುತ್ತೆ ಎನ್ನುವ ಪ್ರಶ್ನೆಗೆ ಸಾಕ್ಷಿಯು 3 ಗುಂಟೆ ಜಮೀನನ್ನು ನನ್ನ ತಂದೆಯವರು 1983-84 ರಲ್ಲಿ ಕರಿಗೌಡರವರಿಗೆ, 3 ಗುಂಟೆ ಜಮೀನನ್ನು ಬೋರೆಗೌಡರವರಿಗೆ,

3 ಗುಂಟೆ ಜಮೀನನ್ನು ಚನ್ನಬಸವಯ್ಯನವರಿಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನನ್ನ ತಮ್ಮನಾದ ಸಿದ್ದೇಗೌಡರಿಗೆ 3 ಗುಂಟೆ ಬಂದಿರುತ್ತದೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮಾನ್ಯ 1 ನೇಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಆಲಿಸಿ ಮುಂದೂಡಲಾಯಿತು)

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಸಾ.ಓ.ಹೇ.ಸ.ಒ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ., ಶ್ರೀರಂಗಪಟ್ಟಣ.**